**ಸಾಕ್ಷಿಯನ್ನು ದಿನಾಂಕಃ 09.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಎಂ.ಎನ್.ಆರ್. ವಕೀಲರಿಂದಃ**

ವಾದಿ ಯಾವ ಸಂಬಂಧ ಈ ದಾವೆ ಹೂಡಿರುತ್ತಾರೆಂಬುದನ್ನು ತಿಳಿದುಕೊಂಡಿರುತ್ತೇನೆ. ಅವರು ರಸ್ತೆಯ ವಿಚಾರವಾಗಿ ದಾವೆ ಹೂಡಿರುತ್ತಾರೆ. ನಮ್ಮ ಮನೆಯ ಉತ್ತರ ದಿಕ್ಕಿಗೆ ವಾದಿಯ ಮನೆ ಇರುತ್ತದೆ. ವಾದಿಯ ಮನೆಯ ಅಸೆಸ್ ಮೆಂಟ್ ನಂ. 518/1046 ಎಂದರೆ ಸರಿ. ವಾದಿಯ ಮನೆಯ ಜಾಗದ ವಿಸ್ತೀರ್ಣ ಪೂರ್ವ-ಪಶ್ಚಿಮಃ 22½ ಅಡಿ ಮತ್ತು ಉತ್ತರ-ದಕ್ಷಿಣಃ 22½ ಅಡಿಗಳಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯನ್ನು ವಾದಿಯ ಮಾವ ಪುಟ್ಟೇಗೌಡರು ಶ್ರೀಮತಿ. ವೆಂಕಟಮ್ಮರವರಿಂದ ಕ್ರಯಕ್ಕೆ ಪಡೆದ ಆಸ್ತಿ ಎಂದರೆ ಸರಿ. ಸದರಿ ದಾವಾ ಆಸ್ತಿಗು ಹಾಗು ನನಗು ಯಾವುದೇ ಹಕ್ಕು-ಹಿತಾಸಕ್ತಿ ಸಂಬಂಧ ಇರುವುದಿಲ್ಲವೆಂದರೆ ಸರಿ. ನಮ್ಮ ಮನೆಯ ಜಾಗದ ವಿಸ್ತೀರ್ಣ ಪೂರ್ವ-ಪಶ್ಚಿಮಃ 24 ಅಡಿ ಮತ್ತು ಉತ್ತರ-ದಕ್ಷಿಣಃ 15 ಅಡಿಯಾಗಿದ್ದು ಅದನ್ನು ನಮ್ಮ ತಂದೆ 1965 ರಲ್ಲಿ ಕರಿಮಲ್ಲೇಗೌಡರ ಹೆಂಡತಿಯಾದ ವೆಂಕಟಮ್ಮರವರಿಂದ ಖರೀದಿಸಿದ ಆಸ್ತಿಯಾಗಿರುತ್ತದೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಆಸ್ತಿಯನ್ನು ಹೊರತುಪಡಿಸಿ ನಿವೇಶನ ಸಂಖ್ಯೆಃ 519 ರ ಆಸ್ತಿಯನ್ನು ಸಹ ಹೊಂದಿರುತ್ತೇವೆ. ಸದರಿ ನಿವೇಶನ ನಮ್ಮ ತಾತನಿಂದ ಬಂದ ಆಸ್ತಿಯಾಗಿರುತ್ತದೆ. ಆ ರೀತಿ ತಾತನಿಂದ ಬಂದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಿ.ಡಿ.-8 ರಲ್ಲಿ ನಮೂದಿಸಿರುವ ಮಲ್ಲೇಗೌಡ ಎಂದರೆ ನನ್ನ ತಂದೆಯಾಗಿರುತ್ತಾರೆ. ಸದರಿ ದಾಖಲೆಯಲ್ಲಿ ನಮೂದಿಸಿರುವ ನಿವೇಶನ ಸಂಖ್ಯೆಃ 519 ರ ಆಸ್ತಿ ನನ್ನ ತಂದೆಗೆ ಹೇಗೆ ಬಂದಿರುತ್ತದೆಂಬ ಬಗ್ಗೆ

ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿ.ಡಿ.-8 ಮತ್ತು ನಿ.ಡಿ.-9 ದಾಖಲೆಗಳನ್ನು ಈ ದಾವೆಗೋಸ್ಕರ ಸೃಷ್ಟಿಸಿಕೊಂಡ ದಾಖಲೆಗಳೆಂದರೆ ಸರಿಯಲ್ಲ. ವೆಂಕಟಮ್ಮವರಿಂದ ಖರೀದಿಸಿದ ಮನೆಯ ಆಸ್ತಿಯ ಪೂರ್ವಕ್ಕೆ - ನಮ್ಮ ತಾತನಾದ ಮರಿಮಲ್ಲೇಗೌಡರವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ - ರಸ್ತೆ, ಉತ್ತರಕ್ಕೆ - ಕೆಂಪೇಗೌಡರ ಅಂಗಳ ಮತ್ತು ದಕ್ಷಿಣಕ್ಕೆ - ನಮ್ಮ ತಾತನಾದ ಮರಿಮಲ್ಲೇಗೌಡರವರಿಗೆ ಸೇರಿದ ಮನೆ ಇರುತ್ತದೆ. ಸದರಿ ಮನೆಯ ಜಾಗದ ವಿಸ್ತೀರ್ಣ ಪೂರ್ವ-ಪಶ್ಚಿಮಃ 24 ಅಡಿ ಮತ್ತು ಉತ್ತರ-ದಕ್ಷಿಣಃ 15 ಅಡಿಯಾಗಿರುತ್ತದೆ. ನಾನು ಹೊಬಳೇಗೌಡ ಅಥವಾ ಕೆಂಪೇಗೌಡರವರಿಂದ ಯಾವುದೇ ಆಸ್ತಿ ಖರೀದಿಸಿರುವುದಿಲ್ಲ. ಮೇಲೆ ಹೇಳಿದ ಮನೆಯ ಜಾಗದ ಪೂರ್ವಕ್ಕೆ ನನ್ನ ತಾತನಿಗೆ ಸೇರಿದ ಆಸ್ತಿ ಸಂಖ್ಯೆ 520 ರ ಮನೆ ಇರುತ್ತದೆ. ದಕ್ಷಿಣಕ್ಕೆ ಇರುವ ನಮ್ಮ ತಾತನಿಗೆ ಸೇರಿದಖಾಲಿ ನಿವೇಶನದ ಸಂಖ್ಯೆ 519 ಆಗಿರುತ್ತದೆ. 520 ರ ಆಸ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ರೀತಿ ದಾಖಲೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾನು ಮೇಲೆ ಹೇಳಿದ ನನ್ನ ಮನೆಯ ಜಾಗದ ಚೆಕ್ಕುಬಂದಿಯನ್ನು ಈ ದಾವೆಗೋಸ್ಕರ ಸೃಷ್ಟಿಸಿಕೊಂಡು ಹೇಳಿರುತ್ತೇನೆಂದರೆ ಸರಿಯಲ್ಲ. ನಾವು ವೆಂಕಟಮ್ಮರವರಿಂದ ಖರೀದಿಸಿದ ಮೇಲೆ ಹೇಳಿದ ಪೂರ್ವ-ಪಶ್ಚಿಮಃ 24 ಅಡಿ, ಉತ್ತರ-ದಕ್ಷಿಣಃ 15 ಅಡಿ ವಿಸ್ತೀರ್ಣದ ಮನೆಯ ಜಾಗವನ್ನು ಬಿಟ್ಟು ಅದೇ ಅಳತೆಯ ಬೇರೆ ಯಾವುದೇ ಆಸ್ತಿ ಇರುವುದಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಮಲ್ಲೇಗೌಡರ ಮನೆ ಇದೆ ಎಂದರೆ ಅದು ನಮ್ಮ ತಂದೆಯ ಮನೆ ಎಂದು ನುಡಿಯುತ್ತಾರೆ. ಅದೇ ರೀತಿ ಪಶ್ಚಿಮಕ್ಕೆ ನನ್ನ ಮನೆ

ಇರುತ್ತದೆಂದರೆ ಸರಿ. ದಕ್ಷಿಣಕ್ಕ ಭ್ಯಾರವರಿಗೆ ಸೇರಿದ ಮನೆ ಇರುತ್ತದೆಂದರೆ ಸರಿ. ಅದೇ ರೀತಿ ದಾವಾ ಆಸ್ತಿಯ ಉತ್ತರಕ್ಕೆ ರಸ್ತೆ ಇರುತ್ತದೆಂದರೆ ಸರಿಯಲ್ಲ. ವಾದಿಯ ಮನೆಗೆ ಹೋಗುವ ಮುಖ್ಯ ರಸ್ತೆಯಿಂದ ಮೇಲುಗಡೆಯಿಂದ 03 ಅಡಿ ವಿಸ್ತೀರ್ಣದ ಗಲ್ಲಿ ಇದ್ದಿದ್ದು ಅದನ್ನು ಸೇರಿಸಿ ವಾದಿ ಮನೆ ಕಟ್ಟಿಕೊಂಡಿರುತ್ತಾರೆ. ಆ ರೀತಿ ಗಲ್ಲಿ ಇರುವ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಮುನ್ಸಿಪಾಲಿಟಿಯವರು ಯಾವ ರಸ್ತೆಗೆ ಕಾಂಕ್ರೀಟ್ ಹಾಕಿಸಿರುತ್ತಾರೆಂದರೆ ಸಾಕ್ಷಿಯು ಮುನ್ಸಿಪಾಲಿಟಿಯವರು ಹಾಕಿಸಿರುವುದಿಲ್ಲ, ನಾವೇ ಹಾಕಿಸಿಕೊಂಡಿರುತ್ತೇವೆಂದು ನುಡಿಯುತ್ತಾರೆ. ಆ ರೀತಿ ನಾವೇ ಕಾಂಕ್ರೀಟ್ ಹಾಕಿಸಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸದರಿ ಕಾಂಕ್ರೀಟ್ ರಸ್ತೆಯ ಪೂರ್ವಕ್ಕೆ: ವಾದಿಯ ಮನೆ, ಪಶ್ಚಿಮಕ್ಕೆ: ರಂಗೇಗೌಡರ ಮನೆ, ಉತ್ತರಕ್ಕೆ: ನನ್ನ ತಂದೆ ಮಲ್ಲೇಗೌಡರ ಮನೆ ಮತ್ತು ದಕ್ಷಿಣಕ್ಕೆ: ರಸ್ತೆ ಇರುತ್ತದೆ. ಸದರಿ ಕಾಂಕ್ರೀಟ್ ರಸ್ತೆಯ ಅಗಲ ಸುಮಾರು 10 ಅಡಿ ಇದ್ದು, ಅದರ ಉದ್ದ ಸುಮಾರು 25 ಅಡಿ ಇರುತ್ತದೆ. ಆ ರೀತಿ ಕಾಂಕ್ರೀಟ್ ರಸ್ತೆ ಮಾಡುವ ಸಂಬಂಧ ಸರಗೂರು ಪಟ್ಟಣ ಪಂಚಾಯಿತಿಯಿಂದ ಯಾವುದೇ ಅನುಮತಿ ಪಡೆದುಕೊಂಡಿರುವುದಿಲ್ಲ. ಸದರಿ ಕಾಂಕ್ರೀಟ್ ರಸ್ತೆಯನ್ನು ಸರಗೂರು ಪಟ್ಟಣ ಪಂಚಾಯಿತಿಯವರು ಮಾಡಿದ್ದು ಎಂದರೆ ಸರಿಯಲ್ಲ. ಸದರಿ ಕಾಂಕ್ರೀಟ್ ರಸ್ತೆಯ ಪೂರ್ವಕ್ಕೆ: 1ನೇ ಮುಖ್ಯ ರಸ್ತೆ ಇರುತ್ತದೆಂದರೆ ಸರಿ. ಪಶ್ಚಿಮಕ್ಕೆ - ಹೊಸ ಬೀದಿ ಇರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಮನೆ ಇದ್ದು ನಂತರ ಬೀದಿ ಇರುತ್ತದೆಂದು ನುಡಿಯುತ್ತಾರೆ. ಸದರಿ ಮನೆಯ ಸಂಖ್ಯೆ: 521 ಆಗಿರುತ್ತದೆ. ಸದರಿ ಮನೆ ನನ್ನ, ನನ್ನ ಸಹೋದರ-ಸಹೋದರಿಯರ ಜಂಟೀ ಖಾತೆ ಹೆಸರಿನಲ್ಲಿರುತ್ತದೆ. ಸದರಿ

ಆಸ್ತಿಯನ್ನು ಕರೀಮಲ್ಲೇಗೌಡರ ಹೆಂಡತಿಯಾದ ವೆಂಕಟಮ್ಮರವರಿಂದ ಖರೀದಿಸಿದ ಆಸ್ತಿಯಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರುಪಸಿರುತ್ತೇನೆ. ಸದರಿ ವೆಂಕಟಮ್ಮರವರಿಂದ ಖರೀದಿಸಿದ ಆಸ್ತಯ ಪೂರ್ವಕ್ಕೆಃ ಮರಿಮಲ್ಲೇಗೌಡರ ಮನೆ, ಪಶ್ಚಿಮಕ್ಕೆಃ ರಸ್ತೆ ಮತ್ತು ಓಬಳೇಗೌಡರ ಮನೆ, ದಕ್ಷಿಣಕ್ಕೆಃ ಮರಿಮಲ್ಲೇಗೌಡರ ಮನೆ ಮತ್ತು ಉತ್ತರಕ್ಕೆಃ ಕಂಪೇಗೌಡರ ಖಾಲಿ ಜಾಗ ಇರುತ್ತದೆಂದರೆ ಸರಿ. ಆ ರೀತಿ ಮೇಲೆ ಹೇಳಿದ ಚೆಕ್ಕುಬಂದಿ ಇದ್ದಾಗ್ಯೂ ಸಹ ನಾನು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ರಸ್ತೆ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಟ್ಟಣ ಪಂಚಾಯಿತಿಯವರು 12x60 ಅಡಿ ವಿಸ್ತೀರ್ಣದ ರಸ್ತೆ ನಿರ್ಮಿಸಿದ್ದು ಅದನ್ನು ಅತಿಕ್ರಮಿಸುವ ಉದ್ದೇಶದಿಂದ ಹಾಗು ವಾದಿಗಳಿಗೆ ಓಡಾಡಲು ತೊಂದರೆ ಕೊಡುವ ಉದ್ದೇಶದಿಂದ ನಾನು ಕಾಂಕ್ರೀಟ್ ರಸ್ತೆ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇಃನೆಂದರೆ ಸರಿಯಲ್ಲ. ದಿನಾಂಕಃ 28.11.2022 ರಂದು ನಾನು ವಾದಿಯು ಓಡಾಡಿಕೊಂಡಿರುವ ಮೇಲೆ ಹೇಳಿರುವ ರಸ್ತೆಯಲ್ಲಿ ಓಡಾಡಲು ತೊಂದರೆ ಕೊಟ್ಟಿದ್ದು ಈಗಲೂ ಸಹ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ. ರಂಗಪ್ಪರವರ ಮನೆಯಿಂದ ಟೈಲರ್ ವಾಸುರವರ ಮನೆಗೆ ಓಡಾಡಲು ಇರುವ ರಸ್ತೆ ನೋಡಿದ್ದೀರಾ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ರಸ್ತೆ ಇರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ರಂಗಪ್ಪರವರ ಮನೆ ನನ್ನ ಹಾಗು ವಾದಿಯ ಮನೆಯ ಹತ್ತಿರವೇ ಇರುತ್ತದೆಂದರೆ ಸರಿ. ನಾನು ದ್ವಿತೀಯ ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 519 ಹಾಗು 520ರ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇದ್ದಾಗ್ಯೂ ಸಹ ವಾದಿಗಳು ಹಿಂದಿನಿಂದಲೂ ಓಡಾಡಿಕೊಂಡಿರುವ

ದಾರಿಗೆ ಈಗ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ. ಆಸ್ತಿ ಸಂಖ್ಯೆ 520ರ ಪೂರ್ವಕ್ಕೆ ನಮಗೆ ಸೇರಿದ 519ರ ಆಸ್ತಿ ಇರುತ್ತದೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಓಬಳೇಗೌಡರ ಮನೆ ಹಾಗು ದಕ್ಷಿಣಕ್ಕೆ ವಾದಿಯ ಮನೆ ಇರುತ್ತದೆ.

519ರ ಆಸ್ತಿಯ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಮ್ಮ 520ರ ಆಸ್ತಿ, ಉತ್ತರಕ್ಕೆ ನಮ್ಮ 521ರ ಆಸ್ತಿ ಹಾಗು ದಕ್ಷಿಣಕ್ಕೆ ವಾದಿಯ ಮನೆ ಇರುತ್ತದೆ. ಸದರಿ ಚೆಕ್ಕುಬಂದಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಸರಗೂರು ಪಟ್ಟಣ ಪಂಚಾಯಿತಿಯವರು ಮೇಲೆ ಹೇಳಿದ 12x 60 ಅಡಿ ವಿಸ್ತೀರ್ಣದ ರಸ್ತೆ ನಿರ್ಮಿಸಿದ್ದರೂ ಸಹ ನಾನು ನಿರ್ಮಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿ.ಡಿ.-1 ಮತ್ತು ನಿ.ಡಿ.-4ರಲ್ಲಿ ಕಾಣಿಸುವ ರಸ್ತೆ ಪಟ್ಟಣ ಪಂಚಾಯಿತಿಯವರು ಮಾಡಿಸಿದ ರಸ್ತೆಯಾಗಿರುತ್ತದೆ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಪಟ್ಟಣ ಪಂಚಾಯಿತಿಯವರು ನಿರ್ಮಿಸಿದ ರಸ್ತೆ ಇರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**